

## ಮರುಮೌಲ್ಯಮಾಪನ

‘ನನಗೆ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನಕ್ಕೆ ಅರ್ಜಿ ಹಾಕಲೇಬೇಕಾಗಿದೆ’ ಎಂದು ಮುರಳಿ ತನ್ನ ಗೆಳೆಯ ಸಂಜಯನ ಬಳಿ ಬಂದು ಗಾಬರಿಯಿಂದ ಹೇಳಿಕೊಂಡ.

‘ಯಾಕೆ, ಫೇಲ್ ಆದೆಯಾ?’ ಎಂದು ಸಂಜಯ ವಿಚಾರಿಸಿದ.

‘ಇಲ್ಲ ಪಾಸಾಗಿಬಿಟ್ಟೆ’ ಎಂದ.

‘ಅರೆ!! ಹಾಗಾದರೆ ಮತ್ಯಾಕೆ ಮರುಮೌಲ್ಯಮಾಪನ?’ ಎಂದು ಮುರಳಿ ಆಶ್ಚರ್ಯಚಕಿತನಾಗಿ ಕೇಳಲು,

‘ಈ ಸಾರಿ ಕಾಲೇಜಿನಲ್ಲಿ ಫೇಲ್ ಆದರೆ ನನಗೆ ಮದುವೆ ಮಾಡಿಸ್ತೇನೆ ಎಂದು ತಂದೆಯವರು ಅಮ್ಮನ ಬಳಿ ಹೇಳಿದ್ದನ್ನು ಕೇಳಿಸಿಕೊಂಡಿದ್ದೆ. ಅದಕ್ಕೇ ಫೇಲ್ ಆಗುವ ಹಾಗೆ ಬರೆದು ಬಂದಿದ್ದೆ’ ಎಂದ ಮುರಳಿ!

**ದೇವಿದಾಸ ಸುವರ್ಣ, ಅಂಕೋಲೆ**

## ಗಿಡವಾಗಿ ಬಗ್ಗದ್ದು


ಅದು ಪ್ರಾಥಮಿಕ ಶಾಲೆಯ ಐದನೇ ತರಗತಿ. ಅಲ್ಲಿ ಅಂದು ಕನ್ನಡ ‘ಗಾದೆ’ಗಳ ಒಳಾರ್ಥದ ಕುರಿತಾಗಿ ಪಾಠ ನಡೆಯುತ್ತಿತ್ತು. ಅಂದಿನ ಗಾದೆ ‘ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?’ ಎಂಬುದು.

ಶಿಕ್ಷಕಿ ಉತ್ಸಾಹದಿಂದ ಉದಾಹರಣೆ ಸಮೇತ ಒಂದು ಗಂಟೆ ಸಮಯ ವಿವರಿಸಿದರು. ‘ಅದಕ್ಕೇ ಹೇಳೋದು, ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?’ ಎಂದು ಮಕ್ಕಳನ್ನು ನೋಡಿ ನಿಟ್ಟುಸಿರು ಬಿಟ್ಟರು. ಅವರ ಮಾತು ಮುಗಿಯುತ್ತಿದ್ದಂತೆ ಕಿಲಾಡಿ ಸಿದ್ಲಿಂಗು ಥಟ್ಟನೆ ನಿಂತು ‘ಯಾಕಿಲ್ಲ ಮೇಡಮ್? ಮರವಾಗಿ ಬಗ್ಗುತ್ತೆ...’ ಎಂದು ಉತ್ಸಾಹದಿಂದ ಒದರಿದ.

‘ಅದ್ಹೆಂಗೋ... ಹೇಳು ನೋಡೋಣ’ ಸಿಟ್ಟಿನಿಂದ ಶಿಕ್ಷಕಿ ಹೇಳಿದರು.

‘ಚಿಕ್ಕವಯಸ್ಸಿನಿಂದ್ಲೂ ಎಂದಿಗೂ ಬಗ್ಗದ ನಮ್ಮ ತಾತ ಈಗ ಬಲಿತು ವಯಸ್ಸಾದ ಮೇಲೆ ತುಂಬಾನೇ ಬಗ್ಗಿಲ್ವೇ!?’ ಎಂದು ಮೇಡಂ ಮುಖ ನೋಡಿದ!

**ಲತಾ ಹೆಗಡೆ, ಹುಬ್ಬಳ್ಳಿ**



ಚಿತ್ರಗಳು: ಗಣೇಶ್ ಆಚಾರ್ಯ